# ಸೆಕ್ಸೀ ಪ್ರಿಯಾಂಕಾ ಹಾಲಿವುಡ್‌ಗೆ?



ಪ್ರಿಯಾಂಕಾ ಚೋಪ್ರಾ ಮುಂದಿನ ವರ್ಷ ಹಾಲಿವುಡ್‌ಗೆ ಜಂಪ್ ಮಾಡುವ ಸಾಧ್ಯತೆ ಇದೆಯೆ? 'ಹೌದು' ಎನ್ನುತ್ತಿದ್ದಾರೆ ಬಾಲಿವುಡ್ ಪಂಡಿತರು. ಇತ್ತೀಚೆಗಷ್ಟೇ 'ವಿಶ್ವದಲ್ಲಿರುವ ಏಷ್ಯಾದ ಅತ್ಯಂತ ಸೆಕ್ಸೀ ಮಹಿಳೆ' ಎಂಬ ಪ್ರಶಸ್ತಿ ಗೆದ್ದುಕೊಂಡ ಪ್ರಿಯಾಂಕಾ ಚೋಪ್ರಾ, ಹಾಲಿವುಡ್ ಚಿತ್ರವೊಂದರಲ್ಲಿ ನಟಿಸಲು ಸಿದ್ಧತೆಗಳನ್ನು ಮಾಡಿಕೊಂಡಿದ್ದಾರೆ ಎನ್ನುವ ಸುದ್ದಿ ಬಂದಿದೆ.

ಕಳೆದ ವರ್ಷ ಕರೀನಾ ಕಪೂರ್ 'ಏಷ್ಯಾದ ಅತ್ಯಂತ ಸೆಕ್ಸೀ ಮಹಿಳೆ' ಎಂಬ ಪ್ರಶಸ್ತಿ ಗೆದ್ದುಕೊಂಡಿದ್ದಳು. ಆನ್‌ಲೈನ್ ಮೂಲಕ ಮಾಡುವ ಈ ಚುನಾವಣೆಯಲ್ಲಿ ಈ ಸಲ ಪ್ರಿಯಾಂಕಾ, ಕರೀನಾಳನ್ನು ಎರಡನೇ ಸ್ಥಾನಕ್ಕೆ ಹಿಂದೆ ತಳ್ಳಿದ್ದಾಳೆ. ಅದಕ್ಕೂ ಹಿಂದೆ ಮೂರು ವರ್ಷಗಳ ಕಾಲ ಈ ಪ್ರಶಸ್ತಿಯನ್ನು ಗೆದ್ದುಕೊಂಡಿದ್ದ ಕತ್ರೀನಾ ಕೈಫ್, ಈ ಸಲ ಮೂರನೆಯ ಸ್ಥಾನಕ್ಕೆ ತೃಪ್ತಿ ಪಟ್ಟುಕೊಳ್ಳಬೇಕಾಯಿತು. ಸೆಕ್ಸೀ ಮಹಿಳೆಯರ ಪಟ್ಟಿಯಲ್ಲಿ ನಾಲ್ಕನೇ ಸ್ಥಾನ ದೀಪಿಕಾ ಪಡುಕೋಣೆಗೆ ಹಾಗೂ ಐದನೇ ಸ್ಥಾನ ಬಿಪಾಸಾ ಬಸುಗೆ ಲಭಿಸಿದೆ. ಅಚ್ಚರಿಯ ಸಂಗತಿಯೆಂದರೆ ಟೀವಿ ಸೀರಿಯಲ್ 'ಏಕ್ ಹಜಾರೋಂ ಮೆ ಮೇರಿ ಬೆಹನಾ ಹೈ'ನಲ್ಲಿ ನಟಿಸುತ್ತಿರುವ ನಿಯಾ ಶರ್ಮಾ ಆರನೆ ಸ್ಥಾನ ಗೆದ್ದಿರುವುದು. ಸೋನಂ ಕಪೂರ್ 7ನೇ ಸ್ಥಾನ ಪಡೆದಿದ್ದರೆ, ಐಶ್ವರ್ಯಾ ರೈ 16ನೇ ಸ್ಥಾನದಲ್ಲಿದ್ದಾರೆ.

ಒಟ್ಟಾರೆ ಪ್ರಿಯಾಂಕಾಗೆ 2012 ಶುಭದಾಯಕ ವರ್ಷ. ಆಕೆ ಅಭಿನಯಿಸಿದ 'ಅಗ್ನಿಪಥ್' ಬಾಕ್ಸಾಫೀಸ್ ಗಳಿಕೆಯಲ್ಲಿ ದಾಖಲೆ ಬರೆಯಿತು. 'ಬರ್ಫಿ' ಚಿತ್ರ ಆಸ್ಕರ್ ಪ್ರಶಸ್ತಿಗೆ ನಾಮಕರಣ ಆಯಿತು. ಪಾಪ್ ಸಂಗೀತದ ಆಲ್ಬಂ ಬಿಡುಗಡೆಯಾಗಿ ಆಕೆ ಗಾಯಕಿ ಎಂಬ ಖ್ಯಾತಿಯೂ ದೊರಕಿತು. ಹಾಲಿವುಡ್‌ಗೆ ಹಾರಲು ಇದು ನಿಜಕ್ಕೂ ಶುಭ ಸಂದರ್ಭ!

■ ಬಿಂದು

